# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 2300 |
| ಸದಸ್ಯರ ಹೆಸರು | : | ಶ್ರೀ.ಕೆ.ಎ.ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 21.03.2022. |
| ಉತ್ತರಿಸುವ ಸಚಿವರು | : | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಹದಿಹರೆಯದ ಹೆಣ್ಣು ಮಕ್ಕಳು ಪ್ರೌಢಾವಸ್ಥೆಯ ನಂತರ ಶಾಲೆಯಿಂದ ಹೊರ ಉಳಿಯುವ/ಮಧ್ಯದಲ್ಲಿ ಬಿಟ್ಟು ಹೋದ ಪ್ರಕರಣಗಳು ಅದರಲ್ಲೂ, ಕೋವಿಡ್ ಸೋಂಕು ವ್ಯಾಪಕವಾಗಿ ಹರಡಿದ ನಂತರ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ | ಹಾಗಿದ್ದಲ್ಲಿ, ಇಂತಹ ಪ್ರಕರಣಗಳನ್ನು ತಡೆಗಟ್ಟಲು ಮತ್ತು ಶಾಲೆಯಿಂದ ಹೊರ ಉಳಿದ/ಮಧ್ಯದಲ್ಲಿ ಬಿಟ್ಟು ಹೋದ ಮಕ್ಕಳನ್ನು ಮರಳಿ ಶಾಲೆಗೆ ಕರೆತರಲು ಸರ್ಕಾರ ರೂಪಿಸಿರುವ ಯೋಜನೆಗಳು ಮತ್ತು ಕಾರ್ಯಕ್ರಮಗಳು ಯಾವುವು; (ಪೂರ್ಣ ವಿವರ ನೀಡುವುದು) | ಶಾಲೆಯಿಂದ ಹೊರಗುಳಿದಿರುವ ಹಾಗೂ ಶಿಕ್ಷಣ ವಂಚಿತ ಮಕ್ಕಳ ಮನೆ ಮನೆ ಸಮೀಕ್ಷೆಯನ್ನು 2021-22 ನೇ ಸಾಲಿನಲ್ಲಿ ಸ್ಥಳೀಯ ಸಂಸ್ಥೆಗಳಾದ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮತ್ತು ನಗರಾಭಿವೃದ್ಧಿ ಇಲಾಖೆಗಳ ಮುಖಾಂತರ ನಡೆಸಲಾಗಿದ್ದು, ದತ್ತಾಂಶ ಮಾಹಿತಿಯನ್ನು ಅನುಬಂಧ-1 ರಲ್ಲಿರಿಸಿದೆ. |
| ಇ | ರಾಜ್ಯದಲ್ಲಿ ಜಾರಿಯಲ್ಲಿರುವ ಕೇಂದ್ರ ಪುರಸ್ಕೃತ ಯೋಜನೆ "ಭೇಟಿ ಬಚಾವೋ-ಭೇಟಿ ಪಡಾವೋ ಯೋಜನೆ" ಮತ್ತು ಸಮಗ್ರ ಶಿಕ್ಷಣ ಯೋಜನೆ ಅಡಿಯಲ್ಲಿ ಆರ್ಥಿಕ ನೆರವು ಮತ್ತು ಇತರೆ ಸೌಲಭ್ಯಗಳನ್ನು ನೀಡುವ ಮೂಲಕ ಶಾಲೆಯಿಂದ ಹೊರ ಉಳಿಯುವ ಪ್ರೌಢಾವಸ್ಥೆಯ ನಂತರದ ಮಕ್ಕಳು ಒಳಗೊಂಡಂತೆ, ಇತರರನ್ನು ಮರಳಿ ಶಾಲೆಗೆ ಕರೆತರಲು ರೂಪಿಸಿರುವ ಕಾರ್ಯಕ್ರಮಗಳು ಯಾವುವು? (ಪೂರ್ಣ ವಿವರ ನೀಡುವುದು) | ಶಾಲೆಯಿಂದ ಹೊರಗುಳಿದಿರುವ ಹಾಗೂ ಶಿಕ್ಷಣ ವಂಚಿತ ಮಕ್ಕಳು ಶಾಲಾ ಶಿಕ್ಷಣದ ಮುಖ್ಯ ವಾಹಿನಿಗೆ ಬರುವಂತೆ ಮಾಡಲು ಹಲವು ಕಾಯ್ದೆಗಳನ್ನು ಮತ್ತು ನಿಯಮಗಳನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ರೂಪಿಸಿವೆ.<br><br>ಅಲ್ಲದೆ, ಅನೇಕ ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ಆ ಮೂಲಕ ಮಕ್ಕಳ ಶಾಲಾ ಶಿಕ್ಷಣವನ್ನು ಪ್ರೋತ್ಸಾಹಿಸಲಾಗುತ್ತಿದೆ.<br><br>ಪ್ರತಿ ವರ್ಷ ಜೂನ್ ತಿಂಗಳಿನಲ್ಲಿ ಶಾಲೆಗೆ ದಾಖಲಾಗದ ಮಕ್ಕಳನ್ನು ಗುರುತಿಸಿ ಶಾಲೆಗೆ ದಾಖಲು ಮಾಡಿಕೊಳ್ಳಲು ಕ್ರಮ ವಹಿಸಲಾಗುತ್ತಿದೆ.<br><br>ಸರ್ಕಾರ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳ ಮತ್ತು ಯೋಜನೆಗಳ ವಿವರವನ್ನು ಅನುಬಂಧ-2ರಲ್ಲಿ ನೀಡಲಾಗಿದೆ. |

ಸಂಖ್ಯೆ: ಇಪಿ 55 ಎಲ್‌ಬಿಪಿ 2022

(ಬಿ.ಸಿ. ನಾಗೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ
ಸಕಾಲ ಸಚಿವರು

# Annexure-01

District wise Data of OOSC and main streamed to regular Government school

| 2021-22 District wise Out of School Children (Never Enrolled & Dropped Out) of Age group 6 years to 16 years | | | | | | | |
|---|---|---|---|---|---|---|---|
| Sl.No | District | Out of School (Never Enrolled+Dropped Out) | | | Total no. of children brought to mainstreame education (Never Enrolled+Dropped Out) | | |
| | | Age group - 6+ to 14 | Age group - 14+ to 16 | Total | Age group - 6+ to 14 | Age group - 14+ to 16 | Total |
| 1 | BAGALKOTE | 328 | 856 | 1184 | 410 | 288 | 698 |
| 2 | BALLARI | 572 | 1249 | 1821 | 414 | 225 | 639 |
| 3 | BENGALURU SOUTH and North (BBMP) | 3650 | 4610 | 8260 | 362 | 55 | 417 |
| 4 | BELAGAVI and Chikkodi | 596 | 1197 | 1793 | 807 | 235 | 1042 |
| 5 | BENGALURU SOUTH and North | 174 | 450 | 624 | 163 | 35 | 198 |
| 6 | BENGALURU RURAL | 218 | 379 | 597 | 152 | 31 | 183 |
| 7 | BIDAR | 543 | 2500 | 3043 | 373 | 53 | 426 |
| 8 | CHAMARAJANAGARA | 128 | 625 | 753 | 180 | 127 | 307 |
| 9 | CHIKKABALLAPURA | 348 | 148 | 496 | 141 | 19 | 160 |
| 10 | CHIKKAMAGALURU | 133 | 664 | 797 | 275 | 68 | 343 |
| 11 | CHITRADURGA | 648 | 1436 | 2084 | 1202 | 334 | 1536 |
| 12 | DAKSHINA KANNADA | 82 | 293 | 375 | 105 | 54 | 159 |
| 13 | DAVANAGERE | 223 | 996 | 1219 | 460 | 133 | 593 |
| 14 | DHARWAD | 755 | 1370 | 2125 | 751 | 135 | 886 |
| 15 | GADAG | 249 | 494 | 743 | 235 | 165 | 400 |
| 16 | HASSAN | 259 | 697 | 956 | 568 | 119 | 687 |
| 17 | HAVERI | 297 | 1113 | 1410 | 147 | 110 | 257 |
| 18 | KALABURAGI | 828 | 1832 | 2660 | 691 | 96 | 787 |
| 19 | KODAGU | 101 | 336 | 437 | 156 | 33 | 189 |
| 20 | KOLAR | 108 | 342 | 450 | 237 | 75 | 312 |
| 21 | KOPPAL | 715 | 883 | 1598 | 208 | 125 | 333 |
| 22 | MANDYA | 291 | 806 | 1097 | 436 | 190 | 626 |
| 23 | MYSURU | 346 | 785 | 1131 | 284 | 52 | 336 |
| 24 | RAICHUR | 892 | 1497 | 2389 | 1537 | 313 | 1850 |
| 25 | RAMANAGARA | 217 | 462 | 679 | 359 | 129 | 488 |
| 26 | SHIVAMOGGA | 384 | 1321 | 1705 | 615 | 216 | 831 |
| 27 | TUMAKURU and MADHUGIRI | 222 | 979 | 1201 | 585 | 239 | 824 |
| 28 | UDUPI | 98 | 179 | 277 | 95 | 51 | 146 |
| 29 | UTTARA KANNADA and Sirsi | 166 | 858 | 1024 | 196 | 269 | 465 |
| 30 | VIJAYAPURA | 853 | 795 | 1648 | 108 | 8 | 116 |
| 31 | YADGIR | 666 | 1350 | 2016 | 340 | 176 | 516 |
| | **Total** | **15090** | **31502** | **46592** | **12592** | **4158** | **16750** |

# ಅನುಬಂಧ-2

- ಭಾರತದ ಸಂವಿಧಾನದಲ್ಲಿ 86ನೇ ತಿದ್ದುಪಡಿ ಮಾಡಿ ಸೇರ್ಪಡೆಗೊಳಿಸಿದ ಅನುಚ್ಛೇದ21(ಎ)ಯು ಪ್ರಾಥಮಿಕ ಶಿಕ್ಷಣವನ್ನು ಮೂಲಭೂತ ಹಕ್ಕು ಎಂದು ಪರಿಗಣಿಸಿದೆ. Right to Education (RTE)ಕಾಯ್ದೆ ಅನ್ವಯ 6 ರಿಂದ 14 ವರ್ಷ ವಯಸ್ಸಿನ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ನೀಡಬೇಕಿದೆ.
- ಶಾಲೆಯಿಂದ ಹೊರಗುಳಿದಿರುವ ಮಕ್ಕಳು ಶಾಲಾ ಶಿಕ್ಷಣದ ಮುಖ್ಯ ವಾಹಿನಿಗೆ ಬರುವಂತೆ ಮಾಡಲು ಆರ್.ಟಿ.ಇ.-2009 ಕಾಯಿದೆಯ ಅಡಿಯಲ್ಲಿ ಕ್ರಮ ವಹಿಸಲಾಗುತ್ತಿದೆ.
- ಶಾಲೆಗೆ ದಾಖಲಾದ ಮಕ್ಕಳ ಹಾಜರಾತಿಯನ್ನು ಪರಿಶೀಲನೆ ಮಾಡಿ, ಮಕ್ಕಳು ಶಾಲೆಗೆ ನಿರಂತರವಾಗಿ ಹಾಜರಾಗುವುದನ್ನು ಖಚಿತಪಡಿಸಿಕೊಂಡು ಕ್ರಮವಹಿಸಲು ತಾಲ್ಲೂಕು ಹಂತದಲ್ಲಿ ಶಿಕ್ಷಣ ಸಂಯೋಜಕರನ್ನು ಹಾಜರಾತಿ ಪ್ರಾಧಿಕಾರಿಗಳಾಗಿ ನೇಮಿಸಿದ್ದು, ಇವರ ಪ್ರಗತಿಯನ್ನು ಪ್ರತಿ ತಿಂಗಳಿಗೊಮ್ಮೆ ಜಿಲ್ಲಾ ಉಪನಿರ್ದೇಶಕರ ಹಂತದಲ್ಲಿ ಪರಿಶೀಲಿಸಲಾಗುತ್ತಿದೆ. (ಸಂಬಂಧಿಸಿದ ಸುತ್ತೋಲೆ ಲಗತ್ತಿಸಿದೆ) ಅನುಬಂಧ-02.
- ಸಮಗ್ರ ಶಿಕ್ಷಣ ಕರ್ನಾಟಕ ವತಿಯಿಂದ 'ಶಾಲೆಯಿಂದ ಹೊರಗುಳಿದ ಮಕ್ಕಳನ್ನು' ವಿವಿಧ ಚಟುವಟಿಕೆ/ಕಾರ್ಯತಂತ್ರಗಳ ಮೂಲಕ ಶಾಲಾ ಶಿಕ್ಷಣದ ಮುಖ್ಯವಾಹಿನಿಗೆ ತರಲು ತರಬೇತಿ/ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ.
- ಸಮೀಕ್ಷೆಯಲ್ಲಿ ಗುರುತಿಸಲಾದ ಶಾಲೆಯಿಂದ ಹೊರಗುಳಿದ ಮಕ್ಕಳ ವಿವರಗಳನ್ನು ಎಸ್.ಎ.ಟಿ.ಎಸ್. (SATS) ತಂತ್ರಾಂಶದಲ್ಲಿ ಅಳವಡಿಸಲಾಗುತ್ತಿದೆ. ಇದರ ಮುಖೇನ ಅವರ ಹಾಜರಾತಿಯನ್ನು ಮೇಲ್ವಿಚಾರಣೆ ಮಾಡಲಾಗುತ್ತಿದೆ.
- ಎಸ್.ಡಿ.ಎಂ.ಸಿ.ಯ ಸಹಯೋಗದೊಂದಿಗೆ ಶಾಲಾ ಶಿಕ್ಷಕರು ಹಾಗೂ ಶಾಲಾ ಮುಖ್ಯೋಪಾಧ್ಯಾಯರು ಪ್ರತಿ ವರ್ಷ ಜೂನ್ ತಿಂಗಳಿನಲ್ಲಿ ಶಾಲೆಗೆ ದಾಖಲಾಗದ ಮಕ್ಕಳನ್ನು ಗುರುತಿಸಿ, ಅವರ ವಯೋಮಾನಕ್ಕೆ ಅನುಗುಣವಾಗಿ ಶಾಲೆಗೆ ದಾಖಲು ಮಾಡಿಕೊಳ್ಳಲಾಗುತ್ತಿದೆ.
- ಮಕ್ಕಳ ಶಾಲಾ ಶಿಕ್ಷಣವನ್ನು ಪ್ರೋತ್ಸಾಹಿಸಲು ಉಚಿತ ಪಠ್ಯಪುಸ್ತಕ, ಉಚಿತ ಸಮವಸ್ತ್ರ, ಶೂ ಮತ್ತು ಸಾಕ್ಸ್, ಬೈಸಿಕಲ್, ಮಧ್ಯಾಹ್ನದ ಉಪಹಾರ ಯೋಜನೆ, ಕ್ಷೀರಭಾಗ್ಯ, ವಿದ್ಯಾರ್ಥಿ ವೇತನ ಇತ್ಯಾದಿ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.
- ಕೋವಿಡ್-19 ಸಾಂಕ್ರಾಮಿಕ ಪಿಡುಗು ಹಿನ್ನೆಲೆಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ವಿಶೇಷವಾಗಿ ವಲಸಿತ ಮಕ್ಕಳಿಗೆ ಯಾವುದೇ ದಾಖಲೆಗಳಿಲ್ಲದಿದ್ದರೂ ಶಾಲೆಗೆ ದಾಖಲು ಮಾಡಿಕೊಳ್ಳುವಂತೆ ಶಾಲೆಗಳಿಗೆ ಸೂಚಿಸಲಾಗಿದೆ.
- ಸದರಿ ಸಮೀಕ್ಷೆಯಲ್ಲಿ ಗುರುತಿಸಲಾದ ಮಕ್ಕಳನ್ನು ಸಂಬಂಧಿಸಿದ ಪೋಷಕರು ಮತ್ತು ಮಕ್ಕಳ ಮನವೊಲಿಸಿ, ಪುನ: ಶಾಲೆಗೆ ಮಕ್ಕಳ ವಯೋಮಾನಕ್ಕೆ ಅನುಗುಣವಾಗಿ ದಾಖಲಿಸಲಾಗುತ್ತಿದೆ. ಈ ಕಾರ್ಯವನ್ನು ಎಸ್.ಡಿ.ಎಂ.ಸಿ.ಯ ಸ್ಥಳೀಯ ಸಂಸ್ಥೆಗಳು ಹಾಗೂ ಸಮುದಾಯದ ಸಹಕಾರದೊಂದಿಗೆ ನಿರ್ವಹಿಸಲಾಗುತ್ತಿದೆ.
- ಈ ಮಕ್ಕಳನ್ನು ಗುರುತಿಸಿ, ಮುಖ್ಯವಾಹಿನಿಗೆ ತರಲು ವಸತಿ/ವಸತಿರಹಿತ ವಿಶೇಷ ತರಬೇತಿ ಕಾರ್ಯಕ್ರಮ, ಶಾಲಾಧಾರಿತ ಸ್ವಯಂಸೇವಕ/ಸ್ವಯಂಸೇವಕರಹಿತ ವಿಶೇಷ ತರಬೇತಿ, ಟೆಂಟ್ ಶಾಲೆ, ನಗರ ಶಿಕ್ಷಣ ವಂಚಿತ ಮಕ್ಕಳಿಗಾಗಿ ಚಿಣ್ಣರ ತಂಗುಧಾಮ ಕೇಂದ್ರಗಳನ್ನು ನಡೆಸಲಾಗುತ್ತಿದೆ.

- ಶಾಲೆ ಬಿಟ್ಟ ಮಕ್ಕಳನ್ನು ವಸತಿ ಶಾಲೆಗಳಾದ ನೇತಾಜಿ ಸುಭಾಷ್ ಚಂದ್ರಬೋಸ್ ಆವಾಸಿಯ ವಿದ್ಯಾಲಯ, ಕಸ್ತೂರ್ ಬಾ ಗಾಂಧಿ ಬಾಲಿಕ ವಿದ್ಯಾಲಯ, ಕರ್ನಾಟಕ ಕಸ್ತೂರ್ ಬಾ ಗಾಂಧಿ ಬಾಲಿಕ ವಿದ್ಯಾಲಯ (ಕೆ.ಜಿ.ಬಿ.ವಿ.)ವಸತಿ ನಿಲಯಗಳಿಗೆ ದಾಖಲಿಸಲಾಗುತ್ತದೆ.
- ಮಕ್ಕಳ ವಯೋಮಾನಕ್ಕೆ ಅನುಗುಣವಾಗಿ ಸೂಕ್ತ ತರಗತಿಗೆ ದಾಖಲು ಮಾಡಿ ಪರಿಹಾರ ಬೋಧನೆ ನೀಡಿ ಶಾಲಾ ಮುಖ್ಯವಾಹಿನಿಗೆ ತರಲು ಕ್ರಮ ವಹಿಸಲಾಗುತ್ತಿದೆ.
- ಗುಣಾತ್ಮಕ ಶಿಕ್ಷಣದ ಜೊತೆಗೆ ಕರ್ನಾಟಕ ಕಸ್ತೂರ್ ಬಾ ಗಾಂಧಿ ಬಾಲಿಕ ವಿದ್ಯಾಲಯ (ಕೆ.ಜಿ.ಬಿ.ವಿ.) ವಸತಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರಿಗೆ ಹೊಲಿಗೆ, ಕಸೂತಿ, ಬೊಂಬೆ ತಯಾರಿಕೆ, ಮೇಣದ ಬತ್ತಿ ತಯಾರಿಕಾ ಕಲಿಕೆಗೆ ಅವಕಾಶ ಕಲ್ಪಿಸಲಾಗುತ್ತಿದೆ. ಕರಾಟೆಯಂತಹಸ್ವಯಂ ರಕ್ಷಣಾ ಕೌಶಲ್ಯಗಳೊಂದಿಗೆ ಯೋಗ ಹಾಗೂ ವಿವಿಧ ಕ್ರೀಡೆಗಳಲ್ಲಿ ತರಬೇತಿಯನ್ನು ನೀಡಲಾಗುತ್ತಿದೆ.
- ಕರ್ನಾಟಕ ಕಸ್ತೂರ್ ಬಾ ಗಾಂಧಿ ಬಾಲಿಕ ವಿದ್ಯಾಲಯ (ಕೆ.ಜಿ.ಬಿ.ವಿ.) ವಸತಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರತಿ ವಿದ್ಯಾರ್ಥಿನಿಗೆ ಮಾಹೆಯಾನ ರೂ.200 ರಂತೆ 12 ತಿಂಗಳಿಗೆ ವಿದ್ಯಾರ್ಥಿವೇತನವನ್ನು ನೀಡಲಾಗುತ್ತಿದೆ.
- ಪರ್ಯಾಯ ಕಲಿಕಾ ಕಾರ್ಯಕ್ರಮಗಳ ಮೂಲಕ ಅಂದರೆ ವಿದ್ಯಾಗಮ, ದೂರದರ್ಶನ, ರೇಡಿಯೋ ಪಾಠಗಳು, ಸಂವೇದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಸ್ವಕಲಿಕೆಯನ್ನು ಪ್ರೇರೇಪಿಸುವ ಸಂಬಂಧ ತರಗತಿವಾರು/ವಿಷಯವಾರು ಪಾಠಗಳನ್ನು ಯೂ-ಟ್ಯೂಬ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ.